

ಬಿಎಂಡಬ್ಲ್ಯು ಐ3 ಮಾದರಿ



ರೇನೊ ಟ್ವಿಝಿ

ಸದ್ಯಕ್ಕೆ ಭೂಮಿ ಎದುರಿಸುತ್ತಿರುವ ಬಹುದೊಡ್ಡ ಸಮಸ್ಯೆ– ವಾಹನಗಳಿಂದ ಉಂಟಾಗುವ ಪರಿಸರ ಮಾಲಿನ್ಯ, ಜಗತ್ತಿನಾದ್ಯಂತ ಪರಿಸರ ಮಾಲಿನ್ಯದ ಪ್ರಮಾಣ ತಗ್ಗಿಸುವ ಕುರಿತು ಚರ್ಚೆಗಳು ನಡೆದೇ ಇವೆ. ವಾಹನಗಳ ಸಂಖ್ಯೆಯನ್ನು ಕಡಿಮೆ ಮಾಡುವುದು ಅಸಾಧ್ಯದ ಸಂಗತಿ. ಎಲ್ಲ ದೇಶಗಳಲ್ಲೂ ಒಂದೇ ಸಮನೆ ವಾಹನಗಳ ಸಂಖ್ಯೆ ಏರುತ್ತಿದೆ. ಹಾಗಾಗಿ ಬಹುತೇಕ ದೇಶಗಳು ಹೊಗೆಯ ಪ್ರಮಾಣ ತಗ್ಗಿಸುವ ನೂರೆಂಟು ಕಾರ್ಯಯೋಜನೆಗಳನ್ನು ಹಮ್ಮಿಕೊಂಡಿವೆ. ಆದರೆ ಅದರಿಂದಲೂ ನಿರೀಕ್ಷಿಸಿದ ಪರಿಣಾಮ ಉಂಟಾಗುತ್ತಿಲ್ಲ. 'ವಾಹನಗಳನ್ನು ಖರೀದಿಸಬೇಡಿ, ಸೈಕಲ್‌ನಲ್ಲಿ ಓಡಾಡಿ' ಎಂದು ಎಷ್ಟೆಲ್ಲ ಪ್ರಚಾರ ಮಾಡಿದರೂ ಜನರು ಕೇಳುತ್ತಿಲ್ಲ; ಅಥವಾ ಸೈಕಲ್‌ನಲ್ಲಿ ಓಡಾಡಲು ಸೂಕ್ತ ವ್ಯವಸ್ಥೆ ಮಾಡಲು ಸರ್ಕಾರಗಳಿಗೆ ಸಾಧ್ಯವಾಗುತ್ತಿಲ್ಲ. ಡೀಸೆಲ್ ಮತ್ತು ಪೆಟ್ರೋಲ್ ಖರೀದಿ ಪ್ರತಿ ವರ್ಷ ದೊಡ್ಡ ಮಟ್ಟದಲ್ಲಿ ಏರುತ್ತಿದೆ. ಜತೆಗೇ ಹೊಗೆಯ ಪ್ರಮಾಣವೂ!

ಒಂದು ಸಮೀಕ್ಷೆಯ ಪ್ರಕಾರ ಪ್ರಪಂಚದಲ್ಲಿ ಸದ್ಯಕ್ಕೆ 120 ಕೋಟಿ ವಾಹನಗಳು ಓಡಾಡುತ್ತಿವೆ. ಇದರಲ್ಲಿ ಬೈಕ್, ಕಾರು, ಟ್ರಕ್, ಬಸ್, ಭಾರೀ ಘನ ವಾಹನ ಇತ್ಯಾದಿ ಎಲ್ಲವೂ ಸೇರಿವೆ. ಈ 120 ಕೋಟಿಗೆ ಪ್ರತಿ ವರ್ಷ ಮತ್ತಷ್ಟು ಕೋಟಿ ಸೇರ್ಪಡೆಯಾಗುತ್ತಿದೆ. ಕಳೆದ ಒಂದೇ ವರ್ಷ ಜಗತ್ತಿನಲ್ಲಿ ಮಾರಾಟವಾದ ವಾಹನಗಳ ಸಂಖ್ಯೆ 8.4 ಕೋಟಿ ಎಂದರೆ ಈಗಿನ ಜನರು ವಾಹನಗಳನ್ನು ಎಷ್ಟು ಪ್ರೀತಿಸುತ್ತಿದ್ದಾರೆ ಎನ್ನುವುದು ಸ್ಪಷ್ಟವಾಗುತ್ತದೆ. ವಾಹನಗಳನ್ನು ಪ್ರೀತಿಸಿದರೆ ಪರವಾಗಿಲ್ಲ; ಅದರ ಜತೆಗೇ ಪೆಟ್ರೋಲ್ ಮತ್ತು ಡೀಸೆಲ್ ಬಳಕೆಯನ್ನು ಹೆಚ್ಚಿಸುತ್ತಿದ್ದಾರೆ ಎನ್ನುವುದೇ ಆತಂಕದ ಸಂಗತಿ. ಸದ್ಯಕ್ಕೆ ಜಗತ್ತಿನ ರಸ್ತೆಗಳ ಮೇಲೆ ಓಡಾಡುತ್ತಿರುವ ವಾಹನಗಳ ಪೈಕಿ ನಗಣ್ಯ ಎನ್ನುವಷ್ಟು, ಅಂದರೆ ಶೇಕಡಾ 2.5